MK (F) 06

# ಅಂತಿಮ ಎಂ.ಎ. ಪರೀಕ್ಷೆ, ಜೂನ್ 2013
## (ಸಿಮ್ ಸ್ಕೀಮ್)
## ಕನ್ನಡ
## ಕೋರ್ಸ್ – VI : ಪ್ರಾಚೀನ ಕನ್ನಡ ಸಾಹಿತ್ಯ - ವಿಶೇಷ ಕವಿ : ಪಂಪ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 90

### ಎ – ವಿಭಾಗ

**ಒಂದು** ಪ್ರಶ್ನೆಗೆ ಉತ್ತರಿಸಿ : **(1×15=15)**

1. ಪಂಪನ ಕಾಲ, ದೇಶ ಮತ್ತು ಇತಿವೃತ್ತವನ್ನು ನಿರೂಪಿಸಿ.
2. ಪಂಪನ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯನ್ನು ವಿವರಿಸಿ.

### ಬಿ – ವಿಭಾಗ

**ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **(2×15=30)**

3. ವೃಷಭನಾಥನ ಜನ್ಮಾಭಿಷೇಕ ಪ್ರಸಂಗದ ಭವ್ಯತೆಯನ್ನು ನಿರೂಪಿಸಿ.
4. ಭರತ–ಬಾಹುಬಲಿಯರ ಯುದ್ಧದ ಪ್ರಸಂಗವನ್ನು ವಿವರಿಸಿ.
5. 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಪಂಪ ಮಾಡಿರುವ ಮಾರ್ಪಾಡುಗಳನ್ನು ಕುರಿತು ಬರೆಯಿರಿ.

### ಸಿ – ವಿಭಾಗ

**ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **(3×10=30)**

6. ಪಂಪಭಾರತದ ಕರ್ಣನ ಪಾತ್ರವನ್ನು ಚಿತ್ರಿಸಿ.
7. ವಜ್ರಜಂಘ ಮತ್ತು ಶ್ರೀಮತಿಯರ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.
8. ಭೀಮ ದುರ್ಯೋಧನರ ಗದಾಯುದ್ಧದ ಸನ್ನಿವೇಶವನ್ನು ಪಂಪ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.
9. ನಿಲಾಂಜನೆಯ ನೃತ್ಯದ ಪ್ರಸಂಗವನ್ನು ಪಂಪ ಹೇಗೆ ವರ್ಣಿಸಿದ್ದಾನೆ ?
10. 'ಪಂಪಭಾರತ ಕ್ಷಾತ್ರ ಜೀವನದ ಕೈಗನ್ನಡಿಯಾಗಿದೆ' – ಈ ಹೇಳಿಕೆಯನ್ನು ವಿಶ್ಲೇಷಿಸಿ.

## ಡಿ – ವಿಭಾಗ

**ಒಂದು** ಪದ್ಯದ ಭಾವ ಸ್ವಾರಸ್ಯವನ್ನು ಬರೆಯಿರಿ : **(1×5=5)**

11. ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದ ನಿತ್ಯತೆ ಮನದೊಳ್
ಬೇರೂಱಿದುದೀಗಳೆಂತಿದಂ ಕಡೆಗಣಿಪೆಂ

12. ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚುಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲೆದಪೆಯಣ್ಣ ಸೂಟ್ಪಿಡೆಯಲಪ್ಪುದು ಕಾಣ ಮಹಾಜಿರಂಗದೊಳ್.

**ಎರಡನ್ನು** ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ : **(2×5=10)**

13. ಪಿರಿಯಣ್ಣಂಗೆಱಗುವುದೇಂ ಪರಿಭವಮೇ

14. ಪೆಱಿರೀವುದೇಂ ಪೆಱಱ ಮಾಡುವುದೇಂ ಪೆಱರಿಂದಮಪ್ಪುದೇಂ

15. ಆನಿರೆ ನೀಮ್ ಇದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ

16. ಬ್ರಹ್ಮಾಂಡಮಂ ಪೊಕ್ಕನಪ್ಪೊಡಮಾ ಬ್ರಹ್ಮನ ಗಂಟಲಂ ಮುಱಿದಪೆಂ.